# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1110 |
| ಸದಸ್ಯರ ಹೆಸರು | ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ |
| ಉತ್ತರಿಸುವ ದಿನಾಂಕ | 28-12-2022 |
| ಉತ್ತರಿಸುವವರು | ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರದ ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ದೇವಸ್ಥಾನಗಳಲ್ಲಿ ಸೇವಾ ಸೌಲಭ್ಯಗಳನ್ನು ಒದಗಿಸಲು ನೀಡುತ್ತಿರುವ ಟೆಂಡರ್‌ಗಳಲ್ಲಿ ತಾರತಮ್ಯ ತೋರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು: | ➢ ಸರ್ಕಾರಿ ಆದೇಶ ಸಂಖ್ಯೆ: ಕಂಇ 84 ಮುಅಬಿ 2007, ದಿನಾಂಕ: 14.07.2008ರ ಆದೇಶಾನುಸಾರ ಧಾರ್ಮಿಕ ದತ್ತಿ ಇಲಾಖೆಯ ಅಧೀನಕ್ಕೊಳಪಟ್ಟ ಧಾರ್ಮಿಕ ಸಂಸ್ಥೆಗಳಿಗೆ ಸೇರಿದ ಕಟ್ಟಡ, ಖಾಲಿ ಜಾಗ, ಅಂಗಡಿ, ಮಳಿಗೆಗಳನ್ನು ಬಹಿರಂಗ ಹರಾಜು ಮಾಡಿ ಗುತ್ತಿಗೆ ನೀಡುವ ಮತ್ತು ಅಂತಹ ಗುತ್ತಿಗೆಯನ್ನು ನವೀಕರಿಸುವ ಸಂಬಂಧ ಈ ಕೆಳಕಂಡಂತೆ ಮೀಸಲಾತಿಯನ್ನು ರಾಜ್ಯ ವ್ಯಾಪಿಯಾಗಿ ಅನುಷ್ಠಾನಕ್ಕೆ ತರಲಾಗಿರುತ್ತದೆ.<br>1) ಪರಿಶಿಷ್ಟ ಜಾತಿಗಳು ಶೇ.20<br>2) ಪರಿಶಿಷ್ಟ ಪಂಗಡ ಶೇ.05<br>➢ ಸರ್ಕಾರದ ಆದೇಶ ಸಂಖ್ಯೆ: ಕಂಇ 14 ಮುಆಬಿ 2015, ದಿನಾಂಕ: 08.04.2015 ರ ಆದೇಶಾನುಸಾರ ವಿಕಲಚೇತನರಿಗೆ ಶೇ. 03 ರಂತೆ ಮೀಸಲಾತಿಯನ್ನು ಕಲ್ಪಿಸುವ ಮೂಲಕ ಸಾಮಾಜಿಕ ನ್ಯಾಯವನ್ನು ಪಾಲಿಸಲಾಗಿರುತ್ತದೆ. |
| ಆ) | ಕನಿಷ್ಠ ಸೇವೆಗಳಾಗಿರುವ ಚಪ್ಪಲಿ ಸ್ಟ್ಯಾಂಡ್ ಹಾಗೂ ಕಸಗುಡಿಸುವ ವ್ಯವಸ್ಥೆಗಳನ್ನು ತಳ ಸಮುದಾಯದವರಿಗೆ ಮೀಸಲಿಡುವ ವ್ಯವಸ್ಥೆಯು ಸಾಮಾಜಿಕ ನ್ಯಾಯದ ವಿರುದ್ಧದ ಧೋರಣೆಯಲ್ಲವೇ; ಈ ವಿಚಾರವಾಗಿ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು. | ಸರ್ಕಾರದ ಆದೇಶ ಸಂಖ್ಯೆ: ಕಂಇ 53 ಮುಆಬಿ 2015 ದಿನಾಂಕ:16.04.2016ರಂತೆ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಗೆ ಒಳಪಡುವ 08 ದೇವಾಲಯಗಳಲ್ಲಿ ಪಾದರಕ್ಷೆ ಕಾಯ್ದು ಕೊಳ್ಳುವ ಗುತ್ತಿಗೆ ನೀಡುವಲ್ಲಿ ಪರಿಶಿಷ್ಟ ಜಾತಿಯವರಿಗೆ ಹಾಗೂ ಪರಿಶಿಷ್ಟಪಂಗಡದವರಿಗೆ ನಿಯಮಾನುಸಾರ ಮೀಸಲಾತಿಯನ್ನು ಅಳವಡಿಸಿಕೊಳ್ಳಲು ಆದೇಶ ನೀಡಲಾಗಿರುತ್ತದೆ.<br>ಸರ್ಕಾರವು ತಳ ಸಮುದಾಯದ ಮನವಿಗೆ ಸ್ಪಂದಿಸಿ ಆದೇಶವನ್ನು ಹೊರಡಿಸಿರುವುದೇ ವಿನಃ ಸಾಮಾಜಿಕ ನ್ಯಾಯದ ವಿರುದ್ಧ ಯಾವುದೇ ಧೋರಣೆಯನ್ನು ತಳೆದಿರುವುದಿಲ್ಲ. ಈ ವಿಚಾರವಾಗಿ ತಳ ಸಮುದಾಯದ ಅಪೇಕ್ಷೆಯಂತೆ ಸಾಮಾಜಿಕ ನ್ಯಾಯದ ಪರವಾಗಿ ಸರ್ಕಾರವು ಕ್ರಮ ಕೈಗೊಳ್ಳುತ್ತದೆ. |
| ಇ) | ಈ ವ್ಯವಸ್ಥೆಯು ಶೋಷಿತ ವರ್ಗಗಳಿಗೆ ಅವಮಾನ ಮಾಡಿದಂತೆ ಆಗುವುದಿಲ್ಲವೇ. | ಉದ್ಭವಿಸುವುದಿಲ್ಲ. |

ಸಂಖ್ಯೆ: ಕಂಇ 243 ಮುಸಪ್ರ 2022

(ಶಶಿಕಲಾ. ಅ. ಜೊಲ್ಲೆ)
ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರು